**ಮಾಗಡಿ ಕ್ಷೇತ್ರದಲ್ಲಿ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ವತಿಯಿಂದ ವಿವಿಧ ಯೋಜನೆಗಳು**

2234 - ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1994 ಡಿಸೆಂಬರ್‌ನಿಂದ ಈವರೆಗೆ ಮಾಗಡಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆಯಿಂದ ವಿವಿಧ ಯೋಜನೆಗಳಡಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗಾಗಿ ಖರ್ಚು ಮಾಡಿದ ಒಟ್ಟು ಹಣವಷ್ಟು? (ಸಮಗ್ರ ವಿವರ ನೀಡುವುದು)*

ಆ) *ಹಾಲಿ ಚಾಲ್ತಿಯಲ್ಲಿರುವ ಹಾಗೂ ಬಾಕಿ ಇರುವ ಕಾಮಗಾರಿಗಳು ಯಾವುವು? ಹಾಗೂ ಪ್ರಸ್ತಾವನೆ ಯಾವುವು? ಈ ಪ್ರಸ್ತಾವನೆಯ ಒಟ್ಟು ಅಂದಾಜು ಮೊತ್ತ ಎಷ್ಟು? ಈ ಪ್ರಸ್ತಾವನೆಗಳನ್ನು ಯಾವಾಗ ಮಂಜೂರು ಮಾಡಲಾಗುವುದು?*

ಶ್ರೀ ನಾಗಪ್ಪ ಸಾಲೋನಿ (ಯುವಜನ ಸೇವೆ ಹಾಗೂ ಕ್ರೀಡಾ ರಾಜ್ಯ ಸಚಿವರು) :

ಅ) ಮಾಗಡಿಯಲ್ಲಿ ತಾಲ್ಲೂಕು ಕ್ರೀಡಾಂಗಣ ಕಾಮಗಾರಿಯನ್ನು ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ವ್ಯಾಪ್ತಿಯಲ್ಲಿ ತೆಗೆದುಕೊಳ್ಳಲಾಗಿದೆ. ಈ ಕಾಮಗಾರಿಗೆ ಜಿಲ್ಲಾ ಪಂಚಾಯತ್ ವತಿಯಿಂದ ರೂ. 10.00 ಲಕ್ಷ ಹಣವನ್ನು ಬಿಡುಗಡೆ ಮಾಡಲಾಗಿದೆ.

ಆ) ಮಾಗಡಿ ತಾಲ್ಲೂಕು ಕ್ರೀಡಾಂಗಣ ನಿರ್ಮಾಣ ಹಾಗೂ ಅಥ್ಲೆಟಿಕ್ ಟ್ರಾಕ್ ಕಾಮಗಾರಿ ಹೊರತು ಬೇರೆ ಯಾವುದೇ ಕಾಮಗಾರಿಯ ಬಗ್ಗೆ ಪ್ರಸ್ತಾವನೆ ಇರುವುದಿಲ್ಲ. ಚಾಲ್ತಿಯಲ್ಲಿರುವ ಕಾಮಗಾರಿಗಳ ಅಂದಾಜು ವೆಚ್ಚ ರೂ. 23.50 ಲಕ್ಷಗಳು 1995ನೇ ಆರ್ಥಿಕ ವರ್ಷದಲ್ಲಿ ಮಂಜೂರು ಮಾಡಲಾಗಿದೆ.

**ಮಾಗಡಿ ವಿಧಾನ ಸಭಾ ಕ್ಷೇತ್ರದ ಸಮಗ್ರ ಅಭಿವೃದ್ಧಿ**

2235 - ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1994 ಡಿಸೆಂಬರ್‌ನಿಂದ ಈವರೆಗೆ ಮಾಗಡಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಲೋಕೋಪಯೋಗಿ ಇಲಾಖೆಯಿಂದ ವಿವಿಧ ಯೋಜನೆಯಡಿಯಲ್ಲಿ ಕೈಗೊಂಡ ಸಮಗ್ರ ಅಭಿವೃದ್ಧಿ ಕಾಮಗಾರಿಗಾಗಿ ವ್ಯಯ ಮಾಡಿದ ಒಟ್ಟು ಹಣವೆಷ್ಟು?*

ಆ) *ಹಾಲಿ ಚಾಲ್ತಿಯಲ್ಲಿರುವ ಹಾಗೂ ಬಾಕಿ ಇರುವ ಕಾಮಗಾರಿಗಳು ಯಾವುವು? ಇವುಗಳ ಒಟ್ಟು ಅಂದಾಜು ಮೊತ್ತವೆಷ್ಟು? ಇವುಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು?*

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಲೋಕೋಪಯೋಗಿ ಇಲಾಖೆ, ಬೆಂಗಳೂರು, ವಿಭಾಗಕ್ಕೆ ಸೇರಿದ ಮಾಗಡಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ವಿವಿಧ ಯೋಜನೆಯಡಿಯಲ್ಲಿ ಕಾಮಗಾರಿಗಳಿಗೆ ವ್ಯಯ ಮಾಡಿದ ಒಟ್ಟು ಹಣದ ವಿವರಗಳು (12:94 ರಿಂದ 9:98ರ ವರೆಗೆ)

*(ಲಕ್ಷ ರೂ.ಗಳಲ್ಲಿ)*

| ಕ್ರ.ಸಂ. | ಲೆಕ್ಕ ಶೀರ್ಷಿಕೆ | ಅನುದಾನ | ವೆಚ್ಚ |
|---|---|---|---|
| 1. | 4202 ಶಿಕ್ಷಣ | 3.50 | 5.95 |
| 2. | 4216 ನ್ಯಾಯಾಡಳಿತ | 5.00 | 1.93 |
| 3. | 4059 ಪೋಲೀಸ್ | 0.50 | 1.40 |
| 4. | 4059 ಪ್ರವಾಸಿ ಮಂದಿರ | 0.60 | 2.40 |
| 5. | 5054 30 ಲಕ್ಷ ರೂ. ಕಾರ್ಯಕ್ರಮ | 23.20 | 28.56 |
| 6. | 5054 20 ಲಕ್ಷ ರೂ. ಕಾರ್ಯಕ್ರಮ | 8.00 | 11.72 |
| 7. | 5054 - ಇತರೇ ರಸ್ತೆಗಳ ನಿರ್ಮಾಣ | 2.70 | 2.70 |
| 8. | 5054 - ಮೇಲ್ದರ್ಜೆಗೇರಿಸಿದ ರಸ್ತೆಗಳು | 1.90 | 7.30 |
| 9. | 5054 - ಡಾಂಬರೀಕರಣ | 0.90 | 5.80 |
| 10. | 5054 - ಸೇತುವೆ ನಿರ್ಮಾಣ | 3.60 | 12.45 |
| 11. | 5054 - ನಬಾರ್ಡ್ ಕಾಮಗಾರಿಗಳು | 148.01 | 32.85 |
| 12. | 8443 ಠೇವಣಿ ವಂತಿಗೆ (ಎ.ಪಿ.ಎಂ.ಸಿ) | 15.00 | 15.00 |
| 13. | 8443 ಲೋಕಸಭಾ ಸದಸ್ಯರ ಅನುದಾನ | 15.00 | 17.99 |
| 14. | 8443 ಯುವಜನ ಸೇವೆಗಳ ಬಗ್ಗೆ | 9.50 | 9.30 |
| 15. | 3054 - ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆ (ಯೋಜನೇತರ) (ಅತಿವೃಷ್ಟಿ ಸೇರಿಸಿ) | 10.00 | 159.74 |

ಆ) ಇದನ್ನು ಅನುಬಂಧ - 1ರಲ್ಲಿ ನೀಡಿದೆ.

## ಅನುಬಂಧ - 1

### ಹಾಲಿ ಚಾಲ್ತಿಯಲ್ಲಿರುವ ಹಾಗೂ ಬಾಕಿ ಇರುವ ಕಾಮಗಾರಿಗಳ ವಿವರ

(ಲಕ್ಷ ರೂ.ಗಳಲ್ಲಿ)

| ಕ್ರಮ ಸಂಖ್ಯೆ | ಕೆಲಸದ ಹೆಸರು | ಅಂದಾಜು ಮೊತ್ತ | 9.98ರ ವರೆಗಿನ ವೆಚ್ಚ | ಕೆಲಸ ಪೂರ್ಣ ಗೊಳ್ಳುವ ದಿನಾಂಕ | 98-99ನೇ ಸಾಲಿನ ಅನುದಾನ | ಲೆಕ್ಕ ಶೀರ್ಷಿಕೆ | ಷರಾ |
|---|---|---|---|---|---|---|---|
| 1. | ಮಾಗಡಿಯಲ್ಲಿ ಪರೀಕ್ಷಣಾ ಮಂದಿರಕ್ಕೆ ಕೊಠಡಿ ನಿರ್ಮಾಣ | 12.00 | 10.05 | 30.11.1998 | 0.18 | 405909 ಲೋಕೋಪಯೋಗಿ ಕಾಮಗಾರಿ | ಕಾಮಗಾರಿ ಮುಗಿದಿದ್ದು ಪೀಠೋಪಕರಣ ಒದಗಿಸಬೇಕಾಗಿದೆ |
| 2. | ಮಾಗಡಿಯಲ್ಲಿ ಪ್ರಥಮ ದರ್ಜೆ ಕಾಲೇಜು ನಿರ್ಮಾಣ | 9.00 | 5.20 | 30.11.1998 | 0.35 (ಠೇವಣಿ ಹಣ) | 4202 (ಉನ್ನತ ಶಿಕ್ಷಣ) | ಕಾಮಗಾರಿ ಮುಕ್ತಾಯದ ಹಂತದಲ್ಲಿದೆ. |
| 3. | ಮಾಗಡಿಯಲ್ಲಿ ಕ್ರೀಡಾಂಗಣ ನಿರ್ಮಾಣ ಕಾಮಗಾರಿ | 23.00 (ಟೆಂಡರ್ ಮೊತ್ತ 12.00 ಲಕ್ಷ ರೂ.) | 9.50 | 30.11.1998 | 3.54 (ಠೇವಣಿಗಾಗಿ) | 8443 (ಡಿಪಾಸಿಟ್ ಕಾಂಟ್ರಿಬ್ಯೂಷನ್) | ಕಾಮಗಾರಿ ಮುಕ್ತಾಯದ ಹಂತದಲ್ಲಿದೆ |
| 4. | ಬಿ.ಎಂ.ಹೆಚ್. ರಸ್ತೆಯ ಕಿ.ಮೀ 50.70 ರಿಂದ 52.00 ಮತ್ತು 62.50 ರಿಂದ 64.50 ಕಿಮೀ ವರೆಗೆ ಮತ್ತು ಸರಪಳಿ 49.80 ಮತ್ತು 50.70ರಲ್ಲಿ ಮೋರಿ ನಿರ್ಮಾಣ. | 7.00 | 4.51 | 31.01.1999 | 0.50 | 5054-30 ಲಕ್ಷ ರೂ.ಗಳ ಶಾಸಕರ ಕಾರ್ಯಕ್ರಮ | ಡಾಂಬರೀಕರಣ ಕಾಮಗಾರಿ ಮಾತ್ರ ಬಾಕಿ ಇದೆ |
| 5. | ಕುದೂರಿನಲ್ಲಿ ಪ್ರಥಮ ದರ್ಜೆ ಕಾಲೇಜು ನಿರ್ಮಾಣ | 5.00 | 3.85 | 30.11.1998 | 1.15 (ಠೇವಣಿ ಹಣ) | ಎಂ.ಪಿ.ಗ್ರ್ಯಾಂಟ್ 1997-98 | ಕಾಮಗಾರಿ ಮುಕ್ತಾಯದ ಹಂತದಲ್ಲಿದೆ. |

(ಎ.ಪಿ.ಎಂ.ಸಿ) ಕೃಷಿ ಉತ್ಪನ್ನ ಮಾರುಕಟ್ಟೆ ಇಲಾಖೆಯ ಕಾಮಗಾರಿಗಳು ರಸ್ತೆಗಳನ್ನು ಮೇಲ್ದರ್ಜೆಗೇರಿಸುವ ಕಾರ್ಯಕ್ರಮ ಹಾಗೂ ಇದ್ಯಾವುದೇ ಲೆಕ್ಕ ಶೀರ್ಷಿಕೆಯಡಿ ಕಾಮಗಾರಿಗಳು ಇರುವುದಿಲ್ಲ.